OS 48/2019
DW-01

ದಿನಾಂಕಃ 19-02-2026.

**ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟಿ ಸವಾಲುಃ ವಾದಿಗಳ ಪರವಾಗಿ ಶ್ರೀ SS ಮಾನ್ಯ ವಕೀಲರಿಂದಃ**

4. ಸದರಿ ದಾಖಲೆಯನ್ನು ಎಷ್ಟು ರೂಪಾಯಿಗಳ stamp paper ಮೇಲೆ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ದಾಖಲೆಯನ್ನು ಶ್ರೀ ರಫಿ ಎನ್ನುವವರು ಬರೆದಿರುತ್ತಾರೆ. ನಿಡಿ.6 ರ ಅನುವಾದವನ್ನು ನಿಡಿ.6(ಎ) ದಂತೆ ಯಾದಗಿರಿಯಲ್ಲಿರುವ ಒಬ್ಬ ಮಾನ್ಯ ವಕೀಲರು ತರ್ಜುಮೆ ಮಾಡಿದ್ದು ಆದರೆ ಯಾರು ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಮಾನ್ಯ ವಕೀಲರು ಜೀವಂತ ಇರುತ್ತಾರೋ ಇಲ್ಲವೋ ಎಂದು ಗೊತ್ತಿರುವುದಿಲ್ಲ. ಸದರಿ ತರ್ಜುಮೆ ಅನುವಾದವನ್ನು ಸುಮಾರು 15-20 ವರ್ಷಗಳಿಂದ ಹಿಂದೆ ಮಾಡಿಸಲಾಗಿರುತ್ತದೆ. ನಿಡಿ.6 ನ್ನು ನಿಡಿ.6(ಎ) ಯಂತೆ ಯಾರು ಅನುವಾದ ಮಾಡಿರುವುದಿಲ್ಲ ಅದನ್ನು ನಾನೇ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

5. ಸನ್ 1970 ರಲ್ಲಿ ನನ್ನ ತಂದೆಯು ಸ.ನಂ.820 ನ್ನು ಖರೀದಿ ಮಾಡಿರುತ್ತಾರೆ. ಸದರಿ ಖರೀದಿ ಸಂದರ್ಭದಲ್ಲಿ ನನ್ನ ಸದರಿ ಅಜ್ಜನವರು ತೀರಿಕೊಂಡು 10 ವರ್ಷಗಳಾಗಿದ್ದವು. ಸದರಿ ಜಮೀನನ್ನು ನನ್ನ ತಂದೆ ಖರೀದಿ ಮಾಡುವ ಸಂದರ್ಭದಲ್ಲಿ ನನ್ನ ವಯಸ್ಸು 30 ರಿಂದ 35 ಇತ್ತು. ಸದರಿ ಸ.ನಂ. 820 ನ್ನು ನನ್ನ ತಂದೆ ಖರೀದಿ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸ.ನಂ. 820 ಕೂಡಾ ನಮ್ಮ ಪಿತ್ರಾರ್ಜಿತ ಸ್ವತ್ತು ಆಗಿರುತ್ತದೆ ಎಂದರೆ ಸರಿಯಲ್ಲ.

6. ನನ್ನ ಅಜ್ಜನಿಗೆ ಒಂದು ಮನೆ ಇತ್ತು. ಈಗ ಸದರಿ ಮನೆ ನನ್ನ ಹೆಸರಿನಲಿರುತ್ತದೆ. ಸದರಿ ಮನೆಯಲ್ಲಿ ವಾದಿಗೆ ಯಾವುದೇ ಪಾಲು ಇರುವುದಿಲ್ಲ. ನಮ್ಮ ತಂದೆ ಇನ್ನೊಂದು ಮನೆಯನ್ನು ಖರೀದಿ ಮಾಡಿದ್ದು ಅದನ್ನು ವಾದಿಯ ತಂದೆಗೆ ಕೊಡಲಾಗಿದೆ. ನಾನು ನನ್ನ ದುಡಿಮೆಯಿಂದ 2 ಮನೆಗಳನ್ನು ಖರೀದಿ ಮಾಡಿ ಒಂದು ಮನೆಯನ್ನು ನನ್ನ ಹೆಸರಿನಲ್ಲಿದ್ದು ಇನ್ನೊಂದು ನನ್ನ ಹೆಂಡತಿಯ ಹೆಸರಿನಲ್ಲಿ ಮಾಡಿರುತ್ತೇನೆ. ಸಾಕ್ಷಿಗೆ ಈಗ ನಿಮ್ಮ ಅಜ್ಜನ ಮನೆಯಲ್ಲಿ ವಾದಿಗೆ ಪಾಲು ಇರುತ್ತದೆಯೋ ಇಲ್ಲವೋ ಎಂದು ಕೇಳಿದ್ದಕ್ಕೆ ಸಾಕ್ಷಿ ವಾದಿ ತಮ್ಮ ತಂದೆ ಖರೀದಿ ಮಾಡಿರುವ ಮನೆಯನ್ನು ತೆಗೆದುಕೊಂಡಿದ್ದ ಕಾರಣ ಅವರಿಗೆ ತಮ್ಮ ಅಜ್ಜನವರು ಮನೆಯಲ್ಲಿ ಯಾವುದೇ ಪಾಲು ಇರುವುದಿಲ್ಲ ಎಂದು ಹೇಳುತ್ತಾರೆ. ಸ.ನಂ.820 ನನ್ನ ತಂದೆ ಅಬ್ದುಲ್ ಸಾಬ್ ಇವರ ಹೆಸರಿನಲ್ಲಿತ್ತು. ಸದರಿ ಸ.ನಂ. ಈಗ ಯಾರ ಹೆಸರಿನಲ್ಲಿರುತ್ತದೆ ಎಂದರೆ ಸಾಕ್ಷಿ ತಾವು 4 ಜನ ಬೇರೆ ಬೇರೆಯಾಗಿ ಮಾಡಿಕೊಂಡಿರುವುದಾಗಿ ಹೇಳುತ್ತಾರೆ. ನಾವು 4 ಜನ ಅಣ್ಣ ತಮ್ಮಂದಿಯರು ಬೇರೆ ಬೇರೆಯಾಗಿ ಪ್ರತ್ಯೇಕ ಮನೆಗಳಲ್ಲಿ ವಾಸ ಮಾಡುತ್ತಿದ್ದೇವೆ ಎಂದರೆ ಸರಿ. ಸುಮಾರು 6-8 ವರ್ಷಗಳಿಂದ ಸದರಿ ಜಮೀನನ್ನು ನಾವು 5 ಜನ ಅಣ್ಣ ತಮ್ಮಂದಿಯರು ನಮ್ಮ ನಮ್ಮ ಹೆಸರುಗಳಿಗೆ ಮಾಡಿಕೊಂಡಿರುತ್ತೇವೆ. ಸ.ನಂ.81, 82 ಹಾಗೂ 83 ರ ಗಳಲ್ಲಿ ನನ್ನ ಅಣ್ಣ ತಮ್ಮಂದಿಯರಿಗೆ ಪಾಲು ಇರುತ್ತದೆ. ನನ್ನ ತಂದೆಯವರು ಸದರಿ ರಸೂಲ್ ಸಾಬ್ ಇವರಿಗೆ ಸ್ವತ್ತುಗಳಲ್ಲಿ ಭಾಗ ಕೊಡಬಾರದು ಎಂದು ಹೇಳಿ ನಿಡಿ.6 ನ್ನು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮನೆ ಹಾಗೂ ಹೊಲಗಳಲ್ಲಿ ನಮ್ಮ ತಂದೆ ಹಾಗೂ ವಾದಿಯ ತಂದೆ ಜೀವಂತ ಇರುವವರೆಗೆ ಒಟ್ಟಿಗೆ ಬಾಳುವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಹಾಗೂ ನನ್ನ ಸದರಿ ಚಿಕ್ಕಪ್ಪ ತೀರಿಕೊಂಡ ನಂತರ ನಾವು 4 ಜನ ಹಾಗೂ ವಾದಿ ಸದರಿ ಮನೆ ಹಾಗೂ ಹೊಲಗಳಲ್ಲಿ

ಜಂಟಿಯಾಗಿ ವಾಸ ಮಾಡುತ್ತೇವೆ ಎಂದರೆ ಸರಿಯಲ್ಲ. ವಾದಿ ಹಾಗೂ ನಾವು ಪ್ರತಿವಾದಿಗಳು ಒಟ್ಟಿಗೆ ವಾಸ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ವಾದಿ ಹಾಗೂ ನಾವು ಪ್ರತಿವಾದಿಗಳು ದುಡಿದು ಬಂದಂತಹ ಹಣದಿಂದ ನನ್ನ ಹೆಂಡತಿ ಹೆಸರಿಗೆ ಮನೆಯನ್ನು ಖರೀದಿ ಮಾಡಿರುತ್ತೇನೆ ಎಂದರೆ  ಸರಿಯಲ್ಲ. ನಮ್ಮ ಹಿರಿಯರಿಂದ ಬಂದ ಸ್ವತ್ತುಗಳಲ್ಲಿ ವಾದಿಗೆ ಪಾಲು ಕೊಡಬಾರದು ಎಂದು ಹೇಳಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ.6 ನ್ನು ನನ್ನ ತಂದೆಯವರು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.